ಓ:ಎಸ್:ನಂ.250/2015

ಡಿ .ಡಬ್ಲ್ಯೂ- 1

**ದಿಃ 13-12-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದ**

ವಾದಿಯು ನಮ್ಮ ವಿರುದ್ದ ಜಮೀನಿನ ವಿಚಾರವಾಗಿ ದಾವೆಯನ್ನು ಹೂಡಿರುತ್ತಾರೆ. ವಾದಿಯು ಸ್ವಾಧೀನಾನುಭವದಲ್ಲಿರುವ 1 ಎಕರೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ಬ್ಲಾಕ್ ನಂ.8, ಪಶ್ಚಿಮಕ್ಕೆಃ ರಸ್ತೆ, ಉತ್ತರಕ್ಕೆ ಬ್ಲಾಕ್ ನಂ.18, ದಕ್ಷಿಣಕ್ಕೆಃ ಬ್ಲಾಕ್ ನಂ.16 ಬರುತ್ತದೆ ಎಂದರೆ ಸರಿ. ವಾದಿಯರು ಸ್ವಾಧೀನ ಹೊಂದಿರುವ ಮಂಗಳೂರು ಹಂಚಿನ ಮನೆ ವಿಸ್ತೀರ್ಣ 40 ಇಂಟು 50 ಅಡಿಗಳು ಎಂದರೆ ಸರಿ. ಸದರಿ ಮನೆಯ ಪೂರ್ವದ ಕಡೆ ರಸ್ತೆ ಬರತ್ತದೆ ಎಂದರೆ. ಪಶ್ಚಿಮದ ಕಡೆ ಸೈಟ್ ನಂ 170, ಉತ್ತರಕ್ಕೆಃ ರಸ್ತೆ, ದಕ್ಷಿಣಕ್ಕೆಃ ಸೈಟ್ ನಂ.172 ಎಂದರೆ ಸರಿ.

ದಾವ ಸ್ವತ್ತು ವಾದಿಗೆ ಜಿಲ್ಲಾಧಿಕಾರಿಗಳಿಂದ ಮಂಜೂರಾದಂತಹ ಸ್ವತ್ತು ಎಂದರೆ ಸರಿ. ವಾದಿಗಳು ವಾಸ ಇರುವ ಮನೆಯು ಸಹ ಸರ್ಕಾರದಿಂದ ಮಂಜೂರಾದ ಮನೆ ಎಂದರೆ ಸರಿ. ದಾವ ಸ್ವತ್ತಿನ ಹಳೆ ಸರ್ವೇ ನಂ 12/17 ಎಂದರೆ ಸರಿ. ದಾವ ಆಸ್ತಿಯ ಹೊಸ ಸರ್ವೆ ನಂ 152 ಎಂದರೆ ಸರಿ. ದಾವ ಎ ಷೆಡ್ಯೂಲ್ ಸ್ವತ್ತು ವಾದಿಗೆ ಸರ್ಕಾರದಿಂದ ಮಂಜೂರಾದ ನಂತರ ವಾದಿ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿ. ಅದರಂತೆ ವಾದಿಯರ ಹೆಸರಿಗೆ ಎ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿ ಪತ್ರಿಕೆ ಸಹ ಬಂದಿದೆ ಎಂದರೆ ಸರಿ.

ಬಿ ಷೆಡ್ಯೂಲ್ ಸ್ವತ್ತು 2ನೇ ವಾದಿಗೆ ಸರ್ಕಾರದಿಂದ ಮಂಜೂರಾದ ಸ್ವತ್ತು ಎಂದರೆ ಸರಿ. ಬಿ ಷೆಡ್ಯೂಲ್ ಸ್ವತ್ತಿನ ಖಾತೆಯು 2ನೇ ವಾದಿಯ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ಪ್ರಸ್ತುತ ಇರಬಹುದು ಆದರೆ ಹಿಂದೆ ಇರಲಿಲ್ಲ ಎಂದು ನುಡಿಯುತ್ತಾರೆ. ಪಂಚಾಯಿತಿ ಮತ್ತು ರೆವಿನ್ಯೂ ಇಲಾಖೆಯವರು ಯಾರು ಸ್ವಾಧೀನಾನುಭವದಲ್ಲಿರುತ್ತಾರೋ ಅವರನ್ನು ನೋಡಿ ಮಂಜೂರು ಮಾಡುತ್ತಾರೆಂದರೆ ಸರಿ.

ವಾದಿಯರು ಮೂಲತಃ ಹೆಬ್ಬೆ ಗ್ರಾಮದ ವಾಸಿಗಳು ಎಂದರೆ ಸರಿ. ವಾದಿಗಳು ತಾವು ಹೊಂದಿರುವ ಜಮೀನು ಅರಣ್ಯ ಇಲಾಖೆಯವರು ವಶಪಡಿಸಿಕೊಂಡ ನಂತರ ವಾದಿಗಳು ಎಂ ಸಿ ಹಳ್ಳಿಗೆ ಬಂದು ವಾಸವಾಗಿದ್ದಾರೆಂದರೆ ಸರಿ. ವಾದಿಯರು ನಿರಾಶ್ರಿತರಾದ ಕಾರಣ ಅವರಿಗೆ ಎಂ ಸಿ ಹಳ್ಳಿಯಲ್ಲಿ ಜಮೀನು ಮತ್ತು

ಮನೆ ಸರ್ಕಾರದಿಂದ ಮಂಜೂರಾಗಿದೆ ಎಂದರೆ ಸರಿಯಲ್ಲ. ನಮ್ಮ ಅಜ್ಜಿಯವರಿಗೆ ಎಂ ಸಿ ಹಳ್ಳಿಯಲ್ಲಿ ಜಮೀನು ಮತ್ತು ಮನೆ ಇತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಡಿಪಡಿಸಿದ್ದೇನೆ. ನಾನು ಇದೇ ನ್ಯಾಯಾಲಯದಲ್ಲಿ ನನ್ನ ಅಜ್ಜಿ ಆಸ್ತಿಯಲ್ಲಿ ನನಗೂ ಸಹ ಪಾಲು ಇದೆ ಎಂದು ವಿಭಾಗಕ್ಕಾಗಿ ವಾದಿಯರ ವಿರುದ್ದ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆ ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ಸರಿ. ಸದರಿ ದಾವೆಯಲ್ಲಿ ವಾದಿಯರು ದಾವ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇದ್ದಾರೆಂದು ಹೇಳಿ ಬರೆಸಿದ್ದೀರಿ ಎಂದರೆ ಸಾಕ್ಷಿಯು ನಾನು ಸ್ವಾಧೀನದಲ್ಲಿದ್ದೇನೆಂದು ನುಡಿಯುತ್ತಾರೆ. ನಾನು ದಾವ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿದ್ದೇನೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಪೆನ್ ಡ್ರೈವ್ ನ್ನು ಹಾಜರುಪಡಿಸಿದ್ದೇನೆ. ದಾವ ಸ್ವತ್ತುಗಳಲ್ಲಿ ನನ್ನ ಹೆಸರು ಸಹ ನಮುದಾಗಿರುತ್ತದೆ. *2000*ನೇ ಸಾಲಿನಲ್ಲಿ ದಾವ ಆಸ್ತಿಗಳಲ್ಲಿ ನನ್ನ ಹೆಸರು ಸಹ ನಮೂದಾಗಿರುತ್ತದೆ. ನಾನು ವಾದಿಗಳಿಗೆ ಮಂಜೂರಾಗಿರುವಂತಹ ಗ್ರಾಂಟಿನ ರದ್ದು ಕೋರಿ ನಾನು ಯಾವುದೇ ಸಕ್ಷಮ ಪ್ರಾಧಿಕಾರದ ಮುಂದೆ ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಪ್ರತಿವಾದಿಗಳು ಸಲ್ಲಿಸಿದ್ದಾರೆಂದು ನುಡಿಯುತ್ತಾರೆ.

ನಾನು ಚಿಕ್ಕವನಾಗಿದ್ದಾಗ ಹೆಬ್ಬೆ ಗ್ರಾಮದಿಂದ ಮಂಗಳೂರು ಗ್ರಾಮಕ್ಕೆ ಹೋಗಿ ವಾಸವಾಗಿದ್ದೇನೆಂದರೆ ಸರಿಯಲ್ಲ. ನಾನು ಮಂಗಳೂರಿಗೆ ವಾಸ ಮಾಡಲು ಹೋದವನು ನಂತರ ಹೆಬ್ಬೆ ಗ್ರಾಮಕ್ಕೆ ವಾಪಸ್ಸು ಬಂದಿಲ್ಲ ಎಂದರೆ ಸರಿಯಲ್ಲ. ವಾದಿಗಳು ಎಂ ಸಿ ಹಳ್ಳಿಗೆ ವಾಸ ಮಾಡಲು ಬಂದಾಗ ಸಹ ನಾನು ಮಂಗಳೂರಿನಲ್ಲಿ ವಾಸವಾಗಿದ್ದೆ ಎಂದರೆ ಸರಿಯಲ್ಲ ನಾನು *2001* ರಿಂದ ಎಂ ಸಿ ಹಳ್ಳಿಯಲ್ಲಿ ವಾಸವಾಗಿದ್ದೇನೆ. ನನಗೂ ಸಹ ಸರ್ಕಾರದಿಂದ ಮನೆ ಮಂಜೂರಾಗಿದೆ ಸಾಕ್ಷಿ ಸ್ವತಃ ಮುಂದುವರಿದು ನಾನು ಅಂಗವಿಕಲನಾದ ಕಾರಣ ಸರ್ಕಾರದವರು ನನಗೆ ಮನೆ ಮಂಜೂರು ಮಾಡಿದ್ದಾರೆಂದು ನುಡಿಯುತ್ತಾರೆ. ದಾವ ಆಸ್ತಿಗಳು ವಾದಿಗಳ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ದಾವ ಸ್ವತ್ತುಗಳಲ್ಲಿ ನನಗೆ ಯಾವುದೇ ಹಕ್ಕು ಹಿತಾಸಕ್ತಿ ಸ್ವಾದೀನ ಇಲ್ಲ ಎಂದರೆ ಸರಿಯಲಲ. ಈ ದಾವೆಯನ್ನು ಸಲ್ಲಿಸುವುದಕ್ಕಿಂತ ಮುಂಚೆ ನಮ್ಮ ಮತ್ತು ವಾದಿಯರ ನಡುವೆ ಜಗಳವಾಗಿದೆ ಎಂದರೆ ಸರಿ. ಸದರಿ ವಿಚಾರದ ಸಂಬಂಧ ಪೊಲೀಸರು ನಮ್ಮ ವಿರುದ್ದ ಒಂದು ದೂರನ್ನು ನೀಡಿದ್ದಾರೆಂದರೆ ಅವರು ಕೊಟ್ಟಿರಲಿಲ್ಲ ನಾವೇ ಅವರ ವಿರುದ್ದ ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ಪೊಲೀಸರು ಇದು ಸಿವಿಲ್ ದಾವೆಗೆ ಸಂಬಂಧಿಸಿದ್ದು ಎಂದು ಹೇಳಿದ್ದರಿಂದ ವಾದಿಗಳು ನಮ್ಮ ವಿರುದ್ದ ದಾವೆಯನ್ನು ಹೂಡಿದ್ದಾರೆ. ನಾನು ದಾವ ಸ್ವತ್ತುಗಳಲ್ಲಿ ಸ್ವಾಧೀನಾನುಭವದಲ್ಲಿ ಇಲ್ಲದೇ ಇದ್ದರೂ ಸಹ ವಾದಿಗಳಿಗೆ

ಸೇರಿದ ಸ್ವತ್ತುಗಳನ್ನು ಲಪಾಟಯಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವ ಸ್ವತ್ತಿಗೆ ಸಂಬಂಧಪಟ್ಟಂತೆ ನನ್ನ ಬಳಿ ಯಾವುದೇ ದಾಖಲಾತಿಗಳು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**